ಮರಾಠಿಯಿಂದಲೂ ಕನ್ನಡಕ್ಕೆ ಕತೆ, ಲೇಖನಗಳನ್ನು ಆಗೀಗ ಇವು ಕನ್ನಡದ ಓದುಗರ ಗಮನಕ್ಕೆ ಬರಬೇಕು ಎಂಬ ಆಸೆಯಿಂದ ಅನುವಾದಿಸಿದ್ದಿದೆ. ತಮ್ಮ ಬಾಳಿನ ಕೊನೆಯ ದಿನಗಳಲ್ಲಿ ಅವರು ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಿದರು – ಪಾಶ್ಚಿಮಾತ್ಯ ನಿರೂಪಣೆಯ ಮಾಯಾಜಾಲದಿಂದ ಪಾರಾಗಿ ನಮ್ಮ ಸಂಸ್ಕೃತಿಯ ಯಥಾರ್ಥ ತಿಳಿವಳಿಕೆಯನ್ನು ದೊರಕಿಸಿಕೊಳ್ಳಬೇಕು ಎಂಬ ಯೋಜನೆಯ ಭಾಗವಾಗಿ. ಖಂಡಿತಕ್ಕೂ ಇದೇನೂ ಸುಲಭದ ಕೆಲಸವಾಗಿರಲಿಲ್ಲ. ಅಪವ್ಯಾಖ್ಯಾನಕ್ಕೆ ತುತ್ತಾಗಿ ಅಪ್ರಯೋಜಕವಾದ 'ಪುರುಷಾರ್ಥ', 'ಅಹಂಕಾರ', 'ಅಧ್ಯಾತ್ಮ', 'ಮೋಕ್ಷ', 'ಶಿಷ್ಟಾಚಾರ' ದಂತಹ ಹಲವು ಆರ್ಷ ಪ್ರಯೋಗಗಳ ಉದ್ದೇಶಿತ ಅರ್ಥಗಳನ್ನು ದೊರಕಿಸಿಕೊಳ್ಳುವುದು, ಆಧುನಿಕ ಪೂರ್ವ ಸಂಕಥನಗಳನ್ನು ನಮ್ಮ ಕಾಲಕ್ಕೆ ಪ್ರಸ್ತುತವಾಗುವಂತೆ ಮರುಹೊಂದಿಸುವುದು ಹಾಗೂ ಮರುವ್ಯಾಖ್ಯಾನಿಸುವುದು, ಇಂದಿನ ಭಾಷೆಯಲ್ಲಿ ಅಂದಿನ ಪಠ್ಯಗಳನ್ನು ಅನುವಾದಿಸುವುದು–ಇಂತಹ ಹಲವು ಸಮಸ್ಯೆಗಳನ್ನು ಅವರ ಈ ಅನುವಾದಗಳು ಆಳವಾದ ತಿಳಿವಳಿಕೆ ಹಾಗೂ ಸಹನೆಯಿಂದ ನಿಭಾಯಿಸಿವೆ. ಅನುವಾದ, ಅನುವಾದ ವಿಮರ್ಶೆ ಹಾಗೂ ಅನುವಾದದ ಸೈದ್ಧಾಂತಿಕ ಆಯಾಮಗಳ ಚರ್ಚೆ ಆಮೂರರ ವಿಮರ್ಶಾ ಬರವಣಿಗೆಯ ವಿಸ್ತರಣೆಯೂ ಅದರ ಒಂದು ದೊಡ್ಡ ಹಾಗು ಮುಖ್ಯವಾದ ಭಾಗವೂ ಆಗಿದೆ.

## 3

ಸೇವಾನಿವೃತ್ತರಾಗಿ ಧಾರವಾಡಕ್ಕೆ ಬಂದು ನೆಲೆಸಿದ ಕೆಲವೇ ದಿನಗಳಲ್ಲಿ ಆಮೂರರು ಕುಮಟೆಗೆ ಬಂದಿದ್ದರು – ಕಾಲೇಜಿನ ವಾರ್ಷಿಕಾಂಕವನ್ನು ಬಿಡುಗಡೆಗೊಳಿಸುವ ವ್ಯಾಜದಿಂದ. ಮೂರು ದಶಕಗಳ ನಂತರದ ಮೊದಲ ಪುನರ್ಭೇಟಿಯಿಂದ ಅವರು ಉಲ್ಲಸಿತರಾಗಿದ್ದರು. ಮನೆಯಂಗಳದ ಆರಾಮ ಖುರ್ಚಿಯಲ್ಲಿ ವಿರಾಮವಾಗಿ ಕುಳಿತಾಗ 'ಪರಿಪೂರ್ಣ ವಿಮರ್ಶಕ' ಎಂಬುದೊಂದು ಪದ ಚರ್ಚೆಗೆ ಬಂತು. ಬಹುಶಃ ಅವರಾಗ 'ವಿಮರ್ಶೆಗೆ ಬಂದ ವಿಪತ್ತು' ಲೇಖನ ಬರೆಯುತ್ತಿದ್ದುದರಿಂದಿರಬೇಕು. ಅವರ ವಿಚಾರ ಹೀಗಿತ್ತು: ವಿಮರ್ಶಕ ಒಂದು ಕೃತಿಗೆ / ಪ್ರಕಾರಕ್ಕೆ / ಸಾಹಿತ್ಯ ಸನ್ನಿವೇಶಕ್ಕೆ ಸ್ಪಂದಿಸುತ್ತಿರುವಾಗ ಆ ಸಾಹಿತ್ಯದ ಪರಂಪರೆಯ ಜಾಯಮಾನ ಏನೆಂಬುದು ಹಾಗೂ ಆ ಸಾಹಿತ್ಯ ಸಂಸ್ಕೃತಿಯ ಇಂದಿನ ಅಗತ್ಯಗಳೇನೆಂಬುದು ಗಮನದಲ್ಲಿರಬೇಕು. ಪರಂಪರೆಯ ಜಾಯಮಾನದ ಅರಿವು ಮೂಡುವುದು ಆ ಪರಂಪರೆಯ ಕೃತಿಗಳೊಂದಿಗಿನ ಒಡನಾಟದ ಸಾತತ್ಯ ಹಾಗೂ ವಿಸ್ತಾರದಿಂದ. ಈ ಒಡನಾಟ ಗಾಢವಾದಷ್ಟೂ ಅದರ ಸ್ವರೂಪದ ಅಂದಾಜು ನಿಖರವಾಗುತ್ತದೆ. ಪರಂಪರೆಯ ಜಾಯಮಾನದ ಅರಿವು ಹಾಗೂ ಅನ್ಯ ಶಿಸ್ತು, ಅನ್ಯ ಸಾಹಿತ್ಯ ಪರಂಪರೆಗಳ ತಿಳಿವಳಿಕೆಯಿಂದ ಆ ಸಾಹಿತ್ಯ ಸಂಸ್ಕೃತಿಯ ಇಂದಿನ ಅಗತ್ಯಗಳೇನೆಂದು ತಿಳಿಯುತ್ತದೆ. ಪರಂಪರೆಯ ಅರಿವು ಹಾಗೂ ಅಗತ್ಯದ ಎಚ್ಚರ ಎರಡೂ ಇರುವ ವಿಮರ್ಶೆ ಉಪಯುಕ್ತವೂ ವಿಶ್ವಾಸಾರ್ಹವೂ ಆಗುತ್ತದೆ.

ಈ ವಿಚಾರಗಳ ಹಿನ್ನೆಲೆಯಲ್ಲೇ ಅವರು 'ವಿಮರ್ಶೆಗೆ ಬಂದ ವಿಪತ್ತು' ಲೇಖನದಲ್ಲಿ ಪ್ರತಿಯೊಂದು ಕೃತಿಯನ್ನೂ ಸ್ವಯಂಭೂ ಎಂದು ಪರಿಗಣಿಸುವ ವಿಮರ್ಶೆಯನ್ನು 'ದೃಷ್ಟಿ ಸಂಕುಚಿತತೆ' ಎಂದೂ 'ಪರಂಪರೆಯ ನಿರಾಕರಣೆ'ಯನ್ನು 'ಘಾತುಕ ವಿಧಾನ'ವೆಂದೂ ಟೀಕಿಸಿದರು. ಪಾಶ್ಚಿಮಾತ್ಯ ವಿದ್ಯಾಭ್ಯಾಸ ಹಾಗೂ ಮಾದರಿಗಳ ಅನುಸರಣೆಯಿಂದ ಹುಟ್ಟಿಕೊಂಡಿರುವ 'ಪರಾವಲಂಬನ ಪ್ರವೃತ್ತಿ'ಯ ಕುರಿತಾದ ವಿಷಾದಪೂರ್ಣವೂ ಆತ್ಮವಿಮರ್ಶಾತ್ಮಕವೂ ಆದ ಧಾಟಿ ಹಾಗೂ ಹಾಗೂ ಕನ್ನಡ ವಿಮರ್ಶೆ ಸ್ವಾವಲಂಬನೆಯನ್ನೂ ಅನನ್ಯತೆಯನ್ನೂ ಸಾಧಿಸುವ ನಿಟ್ಟಿನಲ್ಲಿ ಚಲಿಸಬೇಕೆಂಬ ಕಳಕಳಿ ಅವರ ಆ ಇಡೀ ಲೇಖನಕ್ಕೆ ಮೊನಚು ಹಾಗೂ ತೀವ್ರತೆಯನ್ನು ನೀಡಿದೆ. ವಿಮರ್ಶೆಗೆ ಬಂದ ವಿಪತ್ತನ್ನು ನಿವಾರಿಸಿಕೊಳ್ಳಲು ಅವರು ಸೂಚಿಸಿರುವ ಉಪಾಯಗಳು ಈಗ ಹಿನ್ನೋಟದಲ್ಲಿ